Smt. DAMAYANTHI BORE GOWDA.—Will you atleast set the matter right now ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರಸ್ತೆ ಉದ್ದ ಎಷ್ಟು ಇತ್ತೋ ಅಷ್ಟನ್ನು ತೆಗೆದು ಕೊಂಡಿದ್ದೇವೆ. ಇನ್ನು ಹೊಸ ರಸ್ತೆಯನ್ನು ತೆಗೆದುಕೊಳ್ಳಬೇಕಾದರೆ, ಸರ್ಕಾರದವರು ಹೊಸ ದಾಗಿ ಪಿ. ಡಬ್ಲ್ಯು. ರಸ್ತೆಗಳಾಗಿ ತೆಗೆದುಕೊಳ್ಳುವಾಗ ತಮ್ಮ ಮನವಿಯನ್ನು ಪರಿಶೀಲನೆ ಮಾಡುತ್ತೇವೆ.

Abolition of Special pay of Secretariat Officers

865. Sri B. PUTTASWAMAIAH (Ramanagaram).—

Will the Minister for Finance be pleased to state :—

(*a*) whether the previous Government just before they laid down office abolishd payment of Special Pay that was being paid to the Secretariat Officers ;

(*b*) whether it is a fact that payment of Special Pay has been abolished only in respect of Secretariat Officers ;

(*c*) the compelling reasons for abolishing the same ;

(*d*) whether the I. A. S. Officers are alone given a very high Special Pay in the scale ;

(*e*) whether Government would set right the discrimination and equalise the Special pay of all Secretariat Officers from the date it was abolished by the previous Government ?

Sri K. H. PATIL (Minister for Agriculture and Forests) [On behalf of SRI M. Y. GHORPADE (Minister for Finance)].—

(*a*) **Yes.**

(*b*) Yes.

(*c*) Because higher scales of pay were given to them with effect from 1st January 1970.

(*d*) No.

(*e*) The matter is being examined.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹಿಂದಿನ ಮಂತ್ರಿ ಮಂಡಲದವರು ವಿಶೇಷ ಸಂಬಳವನ್ನು ರದ್ದು ಗೊಳಿಸಿದ ದಿನಾಂಕದಿಂದ ಈ ವ್ಯತ್ಯಾಸವನ್ನು ಹೋಗಲಾಡಿಸಿ ಸಚಿವಾಲಯದಲ್ಲಿನ ಎಲ್ಲ ಅಧಿಕಾರಿಗಳ ವಿಶೇಷ ಸಂಬಳಗಳನ್ನೂ ಸರ್ಕಾರದವರು ಸರಿಸಮ ಮಾಡಿದ್ದಾರೆಯೆ ?

†ಶ್ರೀ ಕೆ. ಎಚ್. ಪಾಟೀಲ್.—ಈ ವಿಷಯವು ಪರಿಶೀಲನೆಯಲ್ಲಿದೆ ಎಂದು ಉತ್ತರವಲ್ಲಿ ಹೇಳಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಸಂಬಳದ ತಾರತಮ್ಯವನ್ನು ತೆಗೆದು ಹಾಕಿ ಸರಿಸಮಾನಾಗಿ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಅನೇಕ ಸಂದರ್ಭಗಳಲ್ಲಿ ಈಗಾಗಲೇ ಸರಿಸಮ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಯಾವ ಯಾವ ಸಂದರ್ಭದಲ್ಲಿ ಪಗಾರವನ್ನು ಹೆಚ್ಚು ಮಾಡಬೇಕು ಆ ಸಂದರ್ಭದಲ್ಲಿ ಹೆಚ್ಚು ಮಾಡಿದೆ. ಎಲ್ಲವನ್ನೂ ಸರಿಸಮಾನಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ರೀತಿ ಸಂಬಳಗಳಲ್ಲಿ ತಾರತಮ್ಯ ಇರುವುದರಿಂದ ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ನಿರಾಶೆಯಾಗುವುದಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಅದು ಅವರವರ ಪ್ರತ್ಯಕ್ಷ ಯೋಗ್ಯತೆಯ ಮೇಲೆ ಅವಲಂಬಿಸಿಕೊಂಡಿದೆ. ಆವರೆ ಅದು ಅವರ ವಕ್ಷತೆಗೆ ಏನೂ ತೊಂದರೆ ಬರುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಸೆಕ್ರೆಟೇರಿಯಟ್‌ನಲ್ಲಿ ಯಾವ ಯಾವ ಅಧಿಕಾರಿಗಳಿಗೆ ಸ್ಪೆಷೆಲ್ ಪೇ ಕೊಡುತ್ತಿದ್ದರೋ ಅದನ್ನು ನಿಲ್ಲಿಸಿರುವುದರಿಂದ ಅವರಿಗೆ ಅನ್ಯಾಯವಾಗಿದೆ. ಪಾರ್ಸನಲಿಟಿಯಾಗಿ ಅವರು ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ, ಕೆಲವು ಸಂದರ್ಭಗಳಲ್ಲಿ ರಾತ್ರಿ 10 ಗಂಟೆಯವರೆಗೆ ಕೆಲಸವನ್ನು ಮಾಡುತ್ತಿರುತ್ತಾರೆ. ಹಿಂದೆ ರಾಜ್ಯಪಾಲರಾಗಿದ್ದ ಧರ್ಮವೀರರವರು ಯಾವುದೋ ಒಂದು ದೃಷ್ಟಿಯನ್ನು ಇಟ್ಟುಕೊಂಡು ಆ ಸ್ಪೆಷಲ್ ಪೇಯನ್ನು ಕತ್ತರಿಸಿ ಹಾಕಿದ್ದಾರೆ. ಇದು ಅನ್ಯಾಯ. ದಯಮಾಡಿ ನಿಷ್ಠೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಸ್ಪೆಷಲ್‌ಪೇ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಸ್ಪೆಷಲ್ ಪೇ ಕೊಟ್ಟರೆ ನಿಷ್ಠೆಯಿಂದ ಕೆಲಸ ಮಾಡುತ್ತಾರೆ ಇಲ್ಲದಿದ್ದರೆ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಒಬ್ಬರಿಗೆ ಒಂದು ಇನ್ನೊಬ್ಬರಿಗೆ ಒಂದು ಮಾಡುವುದಕ್ಕಾಗುವುದಿಲ್ಲ. ಇದರ ಜೊತೆಗೆ ಈ ವಿಷಯವು ಪರಿಶೀಲನೆಯಲ್ಲಿದೆ ಎಂದು ನಾನು ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಐ.ಎ.ಎಸ್. ಆಫೀಸರುಗಳಿಗೆ ಸೆಕ್ರೆಟೇರಿಯಟ್‌ನಲ್ಲಿರುವವರಿಗೂ ಬೇರೆ ಕಡೆ ಇರುವವರಿಗೆ ಸಂಬಳ ವ್ಯತ್ಯಾಸ ಇದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಸ್. ಪಾಟೀಲ್.—ಐ.ಎ.ಎಸ್. ಆಫೀಸರುಗಳಿಗೆ ಐ.ಎ.ಎಸ್. ಪೇ ರೂಲ್ಸ್ ಪ್ರಕಾರ ಪಗಾರವನ್ನು ಗೊತ್ತು ಮಾಡಿದೆ. ಸೆಕ್ರೆಟೇರಿಯೆಟ್‌ನಲ್ಲಿರುವ 200 ರೂಪಾಯಿಗಳ ಹೆಚ್ಚಿನ ಪಗಾರವನ್ನು ಕೊಟ್ಟಿದೆ. ಅದನ್ನೇ ನಡೆಸಿಕೊಂಡು ಬಂದಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ರಾಜ್ಯಪಾಲರ ಅಧಿಕಾರ ಇದ್ದಾಗ ಲೆಜಿಸ್ಲೇಟಿವ್ ಅಸೆಂಬ್ಲಿ ಮತ್ತು ಕೌನ್ಸಿಲ್ ಇರಲಿಲ್ಲ. ಆದರೆ ಈಗ ಅಸೆಂಬ್ಲಿ ಮತ್ತು ಕೌನ್ಸಿಲ್ ಸೇರಿ ಹೆಚ್ಚು ಕಾಲದವರೆಗೆ ನಭೆ ನಡೆಸಿಕೊಂಡು ಇರುವುದರಿಂದ ವಿಧಾನ ಮಂಡಲದ ಅಧಿಕೃತ ರಿಪೋರ್ಟರ್ಸ್‌ಗೆ ಹೆಚ್ಚಿನ ಕೆಲಸಗಳು ಇದ್ದು ಅವರು ರಾತ್ರಿ ಹೆಚ್ಚು ಕಾಲದವರೆಗೆ ಆಫೀಸಿನಲ್ಲಿ ಕೂತುಕೊಂಡು ಕೆಲಸ ಮಾಡಬೇಕಾಗಿದೆಯಲ್ಲದೆ ಬೆಳಿಗ್ಗೆ ಸಹ ಬೇಗನೇ ಬಂದು ಕೆಲಸ ಮಾಡಬೇಕಾಗಿದೆ. ಆವರೆ ಅವರಿಗೆ ಯಾವ ಒಂದು ಸ್ಪೆಷಲ್ ಪೇಯನ್ನು ಸಹ ಕೊಡುತ್ತಾ ಇಲ್ಲ. ಪಾರ್ಲಿಮೆಂಟರಿ ಮಂತ್ರಿಯವರು ಸಹ ಇದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಅವರ ಬಗ್ಗೆ ಕನಿಕರ ತೋರಿಸಿ ಈಗಲಾದರೂ ಸ್ಪೆಷ್ಯಲ್ ಪೇಯನ್ನು ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಪಗಾರವನ್ನು ನಿಗದಿಮಾಡಬೇಕಾಗುತ್ತದೆ. ಆದರೂ ತಾವು ಹೇಳಿದ ವಿಚಾರವನ್ನು ಪರಿಶೀಲನೆ ಮಾಡೋಣ.

ಶ್ರೀ ಬಾಪುಗೌಡ ರಾಯಪ್ಪ.—ಈಗ ಅಂಡರ್ ಸೆಕ್ರಟರಿಗಳಿಗೆ ಕಡಿಮೆ ಸ್ಪೆಷಲ್ ಪೇ ಕೊಡುವುದರಿಂದ ಅವರಿಗೆ ಬಹಳ ತಾರತಮ್ಯ ಮಾಡಿದ ಹಾಗೆ ಆಗಿದೆ. ಆದ್ದರಿಂದ ಅವನ್ನು ತೆಗೆದು ಹಾಕುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ರೀತಿ ಕೇವಲ ಅಂಡರ್ ಸೆಕ್ರೆಟರಿಗಳಿಗೆ ಮಾತ್ರವಲ್ಲ, ಬೇರೆ ವರ್ಗದ ಜನರಿಗೂ ಆಗಿದೆ. ಸರ್ಕಾರ ಎಲ್ಲವನ್ನೂ ಗಮನಿಸಿ ಈ ರೀತಿ ಮಾಡಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸರ್ಕಾರದ ಆಡಳಿತ ದಕ್ಷವಾಗಿ ನಡೆಯಬೇಕಾದರೆ ಕಾರ್ಯದಕ್ಷತೆಯುಳ್ಳ ಅಧಿಕಾರಿಗಳು ತೃಪ್ತಿಕರವಾಗಿ ಕೆಲಸ ಮಾಡುವುದು ಯೋಗ್ಯವಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರ ಅಭಿಪ್ರಾಯವೇ ನಮ್ಮ ಅಭಿಪ್ರಾಯ.

MADAM SPEAKER.—Sri V. M. Ghadi may put Question No. 933.